ಕರ್ನಾಟಕ ವಿಧಾನಸಭೆ

ಶುಕ್ರವಾರ 20ನೇ ಜುಲೈ 2001 ಸದನವು ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 10 ಗಂಟೆ 10 ನಿಮಿಷಕ್ಕೆ ಸಮಾವೇಶಗೊಂಡಿತು.

ಅಧ್ಯಕ್ಷರಾದ ಶ್ರೀ ಎಂ.ಪಿ.ವೆಂಕಟಪ್ಪ ಅವರು ಪೀಠದಲ್ಲಿ ಉಪಸ್ಥಿತರಿದ್ದರು.

ಧರಣಿ

(ಸಭೆಯು ಪ್ರಾರಂಭವಾಗುತ್ತಿದ್ದಂತೆ ಭಾರತೀಯ ಜನತಾಪಕ್ಷದ ಸದಸ್ಯರು, ಸಂಯುಕ್ತ ಜನತಾದಳದ ಸದಸ್ಯರು ಬಾವಿಗೆ ಬಂದು ರೈತ ವಿರೋಧಿ ಸರ್ಕಾರಕ್ಕೆ, ಬಡ್ಡಿ ಮನ್ನಾ ಮಾಡದ ಸರ್ಕಾರಕ್ಕೆ ರೈತರಿಗೆ ವಿದ್ಯುಚ್ಛಕ್ತಿ ಕೊಡದ ಸರ್ಕಾರಕ್ಕೆ ಧಿಕ್ಕಾರವೆಂದು ಕೂಗುತ್ತಿದ್ದರು)

+ ಶ್ರೀ ಜಗದೀಶ್ ಶೆಟ್ಟರ್(ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಇವತ್ತು ಈ ರಾಜ್ಯದಲ್ಲಿ ಇಷ್ಟೊಂದು ಭೀಕರವಾದ ಬರ ಬಂದಿದೆ. ರೈತರು ಹಣವಿಲ್ಲದೆ, ಸಾಲ ಕಟ್ಟಲಾರದ ಪರಿಸ್ಥಿತಿಯಲ್ಲಿದ್ದಾರೆ; ಇಂದಿನ ದಿನಪತ್ರಿಕೆಯಲ್ಲಿಯೂ ಕೂಡ ಇದು ವರದಿಯಾಗಿದೆ.

ಶ್ರೀ ಕೆ.ವಿಜಯಕುಮಾರಶೆಟ್ಟಿ : ಮಾನ್ಯ ಅಧ್ಯಕ್ಷರೆ, ಪ್ರಶ್ನೋತ್ತರಕ್ಕೆ ಅವಕಾಶವನ್ನು ಮಾಡಿಕೊಡಬೇಕು. ನಾವು ಅನೇಕ ದಿನಗಳಿಂದ ಪ್ರಶ್ನೆಗಳನ್ನು ಕಳುಹಿಸಿದ್ದೇವೆ.

(ಗೊಂದಲ)

ವಿರೋಧಪಕ್ಷದವರದ್ದೆ ಪ್ರತಿ ದಿನವು ಪತ್ರಿಕೆಯಲ್ಲಿ ವರದಿಯಾಗುತ್ತದೆ. ರೈತರಿಗೋಸ್ಕರ ಏನಾದರೂ ಮಾಡಿದ್ದರೆ ಅದು ಕಾಂಗ್ರೆಸ್ ಪಕ್ಷದ ಸರ್ಕಾರವೇ. ಇವರು ಪತ್ರಿಕೆಯಲ್ಲಿ ಪ್ರಚಾರಕ್ಕೋಸ್ಕರ ಮಾಡುತ್ತಾರೆಯೇ ಹೊರತು ಅವರಿಗೆ ನಿಜವಾಗಿಯೂ ಕಾಳಜಿ ಇಲ್ಲ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ನಿನ್ನೆ ಕೆಲವೊಂದು ಪ್ರಮುಖವಾದ ಬೇಡಿಕೆಗಳನ್ನು ಇಟ್ಟುಕೊಂಡು ನಾವು ಈ ಧರಣಿ ಸತ್ಯಾಗ್ರಹವನ್ನು ಮಾಡುತ್ತಿದ್ದೇವೆ. ಇವತ್ತು ಈ ರಾಜ್ಯದಲ್ಲಿನ ಬರಪೀಡಿತ ಪ್ರದೇಶಗಳಲ್ಲಿ ರೈತರೇನು ಕಷ್ಟ ಅನುಭವಿಸುತ್ತಿದ್ದಾರೆ, ಆರ್ಥಿಕವಾಗಿಯೂ ಕಷ್ಟವನ್ನು ಅನುಭವಿಸುತ್ತಿದ್ದಾರೆ. ಜಾನುವಾರುಗಳು

ಕಸಾಯಿಖಾನೆಗೆ ಹೋಗುತ್ತಿವೆ, ಈ ಬಗ್ಗೆ ಇಂದಿನ ಪತ್ರಿಕೆಯಲ್ಲೂ ವರದಿಯಾಗಿದೆ. ಇವತ್ತು ಗೋವಾ ಮತ್ತು ಮಹಾರಾಷ್ಟ್ರಕ್ಕೆ ರೈತರುಗಳು ವಲಸೆ ಹೋಗುತ್ತಿದ್ದಾರೆ, ಇದು ನಿತ್ಯವೂ ನಡೆಯುತ್ತಿದೆ. ಈ ರೀತಿಯಾದ ಬರಗಾಲಕ್ಕೆ ತಕ್ಷಣವಾದ ಕಾಮಗಾರಿಗಳನ್ನು ಕೈಗೊಳ್ಳಬೇಕಾಗಿತ್ತು, ಆದರೆ ಕೈಗೊಳ್ಳಲಿಲ್ಲ. ಸರ್ಕಾರ ನಿರ್ಲಕ್ಷ್ಯ ಮಾಡಿತು. ರೈತರಿಗೆ ಇವತ್ತು ಏನಾದರೂ ಸ್ವಲ್ಪ ಪರಿಹಾರವನ್ನು ಕೊಡಬೇಕು. ಬಡ್ಡಿ ಮನ್ನಾ ಮಾಡುವುದಿರಬಹುದು, ಸಾಲ ವಸೂಲಾತಿಯನ್ನು ನಿಲ್ಲಿಸುವುದಿರಬಹುದು, ಅಲ್ಪಾವಧಿ ಸಾಲವನ್ನು ದೀರ್ಘಾವಧಿ ಸಾಲವನ್ನಾಗಿ ಪರಿವರ್ತಿಸುವುದು ಇವು ಕೆಲವು ಪ್ರಮುಖವಾದ ಬೇಡಿಕೆಗಳಾಗಿವೆ. ಇವತ್ತು ವಿದ್ಯುಚ್ಛಕ್ತಿ ಸೌಲಭ್ಯವನ್ನು ಕಟ್ ಮಾಡುವುದು ನಡೆಯುತ್ತಿದೆ. ರೈತರು ಇಂದು ಪಂಪ್‌ಸೆಟ್‌ನಿಂದ ಹೊಲಕ್ಕೆ ನೀರು ಹಾಯಿಸಬೇಕಾದರೆ ವಿದ್ಯುಚ್ಛಕ್ತಿ ಅವಶ್ಯಕತೆ ಇದ್ದು, ಅಲ್ಲೂ ಅದಕ್ಕೂ ತೊಂದರೆಯಾಗುತ್ತದೆ. ಈ ರೀತಿ ರೈತರು ಎಲ್ಲಾ ರೀತಿಯಿಂದಲೂ ತೊಂದರೆಗೊಳಗಾಗುತ್ತಿದ್ದಾರೆ.

ಆದುದರಿಂದ ಈ ಬೇಡಿಕೆಗಳನ್ನು ಈಡೇರಿಸಲಾರದಂತಹ ಪರಿಸ್ಥಿತಿಯಲ್ಲಿ ಸರ್ಕಾರವೇನು ಇಲ್ಲ. ಸಾವಿರಾರು ಕೋಟಿ ರೂಪಾಯಿಗಳು ಅಬ್ಕಾರಿ ಇಲಾಖೆಯಲ್ಲಿ ಸೋರಿ ಹೋಗುತ್ತಿದೆ. ಆದರೆ 400 ಕೋಟಿ ರೂಪಾಯಿಗಳ ಬಡ್ಡಿ ಮನ್ನಾ ಮಾಡಿ ಎಂದರೆ ಸರ್ಕಾರಕ್ಕೆ ಆಗುತ್ತಿಲ್ಲ. ನಾವು ವಸೂಲಾತಿಯನ್ನು ನಿಲ್ಲಿಸುವ ಬೇಡಿಕೆಯನ್ನಿಟ್ಟಿದ್ದೇವೆ, ನಾವು ಈ ರೀತಿ ಬೇಡಿಕೆಗಳನ್ನಿಟ್ಟಿದ್ದರೂ, ಸರ್ಕಾರಕ್ಕೆ ಜ್ಞಾನೋದಯವಾಗುತ್ತಿಲ್ಲ. ನಿನ್ನೆ ನಾವು ಧರಣಿ ಕುಳಿತಿದ್ದೆವು. ಇವತ್ತು ನಾವು ಬೆಳಿಗ್ಗೆ ಬರುವುದರೊಳಗಾಗಿ ಸರ್ಕಾರಕ್ಕೆ ಸಂಬಂಧಪಟ್ಟವರಲ್ಲಿ ಏನಾದರೂ ಜ್ಞಾನೋದಯವಾಗ- ಬಹುದೆಂದು ಭಾವಿಸಿದ್ದೆವು. ಅವರಿಗೆ ಇನ್ನೂ ಜ್ಞಾನೋದಯವಾಗಿಲ್ಲ. ರೈತರು ಸರ್ಕಾರಕ್ಕೆ ಹಿಡಿಶಾಪ ಹಾಕುತ್ತಿದ್ದಾರೆ.

ಇದೇ ರೀತಿ ಮುಂದುವರಿದರೆ ಶಾಪದಿಂದ ಈ ಸರ್ಕಾರ ಹೋಗುತ್ತದೆ. ರೈತರ ಶಾಪದಿಂದ ಈ ಸರ್ಕಾರ ಮುಂದುವರಿಯಲಿಕ್ಕೆ ಸಾಧ್ಯವಿಲ್ಲ. ಇವತ್ತು ಅಧಿಕಾರದಲ್ಲಿ ಉಳಿಯುವುದಕ್ಕೆ ನೈತಿಕ ಹಕ್ಕು ಎಳ್ಳಷ್ಟು ಇಲ್ಲ. ಮಾನ್ಯ ಅಧ್ಯಕ್ಷರೆ, ತಾವು ನಿನ್ನೆ ಮುಖ್ಯಮಂತ್ರಿಗಳು ಸದನದಲ್ಲಿದ್ದಂತಹ ಸಂದರ್ಭದಲ್ಲಿ ಹೇಳಿದಿರಿ. ಇವತ್ತು ಸಾಯಂಕಾಲ ಕ್ಯಾಬಿನೆಟ್ ಮೀಟಿಂಗ್ ಇದೆ. ಏನಾದರೂ ಒಂದು ರೈತರ ಪರವಾಗಿ ನಿರ್ಣಯವನ್ನು ಕೈಗೊಳ್ಳಬಹುದು ಎನ್ನುವ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದೀರಿ. ಆದರೆ ಬೆಳಗಿನವರೆಗೆ ಯಾವುದೇ ಒಂದು ನಿರ್ಣಯ ಬರಲಿಲ್ಲ. ರಾಜ್ಯಸರ್ಕಾರ ಇವತ್ತು ರೈತರನ್ನು ನಿರ್ಲಕ್ಷ್ಯ ಮಾಡುತ್ತಿದೆ. ಬಡ್ಡಿ ಮನ್ನಾ ಮಾಡುವಂತಹ ಕೆಲಸ. ಬೇರೆ ರಾಜ್ಯಗಳಲ್ಲಿ ಬಡ್ಡಿ ಮನ್ನಾ ಮಾಡಿದ್ದಾರೆ. ಹಿಂದಿನ ಸರ್ಕಾರ ಮಾಡಿದೆ. ಬಡ್ಡಿ ಮನ್ನಾ ಮಾಡುವಂತಹದ್ದು ಸಾಲ ವಸೂಲಾತಿಯನ್ನು ನಿಲ್ಲಿಸುವಂತಹದ್ದು ಆಮೇಲೆ ಅಲ್ಪಾವಧಿ ಸಾಲವನ್ನು ದೀರ್ಘಾವಧಿ ಸಾಲವನ್ನಾಗಿ ಕನ್ವರ್ಟ್ ಮಾಡತಕ್ಕದ್ದು. ಇವು ಪ್ರಮುಖ

ಬೇಡಿಕೆಗಳು. ಇದರಲ್ಲಿ ಆರ್ಥಿಕ ಪರಿಸ್ಥಿತಿಯನ್ನು ನೋಡಿಕೊಂಡು ತೀರ್ಮಾನ ತೆಗೆದುಕೊಳ್ಳುವುದಕ್ಕೆ ಸಾಧ್ಯವಿದೆ. ಅದಕ್ಕಾಗಿ ನಾನು ಮತ್ತೊಮ್ಮೆ ಒತ್ತಾಯ ಮಾಡುತ್ತಿದ್ದೇನೆ. ಸರ್ಕಾರ ಮತ್ತು ಮುಖ್ಯಮಂತ್ರಿಗಳಿಗೆ ಒತ್ತಾಯ ಮಾಡುತ್ತಿದ್ದೇನೆ ಇದರ ಬಗ್ಗೆ ತಕ್ಷಣ ಒಂದು ನಿರ್ಣಯ ಕೈಗೊಳ್ಳಬೇಕು. ಇಲ್ಲದಿದ್ದರೆ ನಮ್ಮ ಹೋರಾಟ ಮುಂದುವರೆಯುತ್ತದೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ.

+ಶ್ರೀ ಪಿ.ಜಿ.ಆರ್.ಸಿಂಧ್ಯ(ಕನಕಪುರ): ಮಾನ್ಯ ಅಧ್ಯಕ್ಷರೆ, ಪ್ರಜಾತಂತ್ರ ವ್ಯವಸ್ಥೆಯಲ್ಲಿ ನಾವು ಧರಣಿಯನ್ನು ಮಾಡತಕ್ಕದ್ದು ಇದು ಸರಿಯೆಂದು ನನಗೂ ಸಹಿತ ಅನ್ನಿಸುತ್ತಿಲ್ಲ. ಸದನದಲ್ಲಿ ನಾವು ಮುಖ್ಯವಾದ ವಿಚಾರಗಳನ್ನು ಚರ್ಚೆ ಮಾಡಬೇಕಾಗುತ್ತದೆ. ಚರ್ಚೆಮಾಡಿ ಸಮಸ್ಯೆಗಳಿಗೆ ಪರಿಹಾರವನ್ನು ಕಂಡು ಹಿಡಿಯಬೇಕೇ ವಿನಹ ನಮ್ಮ ಪಕ್ಷಗಳಿಗೆ ಗೆಲುವು ಎನ್ನತಕ್ಕದ್ದನ್ನು ಪತ್ತೆ ಮಾಡಲಿಕ್ಕೆ ನಾವು ತಯಾರಿಲ್ಲ. ನಾವು ಪರಿ ಪರಿಯಾಗಿ ಸರ್ಕಾರವನ್ನು ಕಳೆದ ನಾಲ್ಕು ದಿನಗಳಲ್ಲಿ ಸದನದ ಎರಡೂ ಕಡೆಯ ಸದಸ್ಯರುಗಳು ರಾಜ್ಯದಲ್ಲಿರತಕ್ಕ ಗಂಭೀರವಾದ ಬರಗಾಲದ ಪರಿಸ್ಥಿತಿಯ ಬಗ್ಗೆ ತಮ್ಮ ಗಮನಕ್ಕೆ ಹಾಗು ಸರ್ಕಾರದ ಗಮನಕ್ಕೆ ತಂದಿದ್ದಾರೆ. ಬಹಳ ಸಂತೋಷದ ವಿಚಾರವೆಂದರೆ, ತಾವು ಈ ಮಧ್ಯದಲ್ಲಿ ಸಭಾಧ್ಯಕ್ಷರಾಗಿದ್ದುಕೊಂಡು ಮಾನ್ಯ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಒಂದು ನಿಯೋಗವನ್ನು ಪ್ರಧಾನಮಂತ್ರಿಗಳ ಹತ್ತಿರ ತೆಗೆದುಕೊಂಡು ಹೋಗಬೇಕೆನ್ನುವ ಮಾತನ್ನು ಸದನ ಪ್ರಾರಂಭವಾದ ದಿವಸ ಹೇಳಿದ್ದೀರಿ. ಆದರೆ ದುರಾದೃಷ್ಟವಶಾತ್ ಕಳೆದ ನಾಲ್ಕು ದಿವಸಗಳ ಸತತವಾದ ಚರ್ಚೆಯ ನಂತರ ಸಿಕ್ಕಿರತಕ್ಕ ಫಲಿತಾಂಶದ ಬಗ್ಗೆ ನಮಗೆಲ್ಲರಿಗೂ ಬಹಳ ನಿರಾಸೆಯಾಗಿದೆ. ಇವತ್ತಿಗೂ ಸಹಿತ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಸರ್ಕಾರದಲ್ಲಿ ಬಹಳ ಆಗ್ರಹಪಡಿಸುವುದೇನೆಂದರೆ ಬಹಳ ಮುಖ್ಯವಾಗಿ ನಾವು ಕೇಳತಕ್ಕ ಪ್ರಮುಖವಾದ ಬೇಡಿಕೆಯೆಂದರೆ ರಾಜ್ಯದಲ್ಲಿ ಕುಡಿಯುವ ನೀರಿಗೆ ಬಹಳ ತೊಂದರೆಯಿದೆ. ಪಟ್ಟಣ ಪ್ರದೇಶಗಳಲ್ಲಿ ಕುಡಿಯುವ ನೀರಿಗೆ ಬಹಳ ತೊಂದರೆಯಿದೆ. ಪ್ರತಿಯೊಂದು ತಾಲ್ಲೂಕಿನಲ್ಲೂ ಒಂದೆರಡು ಪಟ್ಟಣ ಪ್ರದೇಶಗಳಿವೆ ಅಲ್ಲಿ ಕುಡಿಯುವ ನೀರಿಗೆ ಬಹಳ ತೊಂದರೆಯಿದೆ. ಅದರ ಜೊತೆಗೆ ಸುಮಾರು 5 ಸಾವಿರ ಪಂಚಾಯಿತಿಗಳಲ್ಲಿ ಕುಡಿಯುವ ನೀರಿಗೆ ತೊಂದರೆಯಿದೆ. ಏಪ್ರಿಲ್‌ನಿಂದ ಇವತ್ತಿನವರೆಗೆ ವಸ್ತುಸ್ಥಿತಿಯಲ್ಲಿ ಬಿಡುಗಡೆ ಮಾಡಿರತಕ್ಕದ್ದು ಕೇವಲ 38 ಕೋಟಿ ರೂಪಾಯಿಗಳು ಅದರಲ್ಲಿ 12 ಕೋಟಿ ರೂಪಾಯಿಗಳನ್ನು ಎರಡು ತಿಂಗಳ ಹಿಂದೆ ಬಿಡುಗಡೆ ಮಾಡಲಾಗಿದೆ. ಈಗ ಬಿಡುಗಡೆಯಾಗಿರತಕ್ಕದ್ದು 24 ಕೋಟಿ ರೂಪಾಯಿಗಳು ಅದರಲ್ಲಿ ಒಂದೊಂದು ಪಂಚಾಯಿತಿಗೆ 5ರಿಂದ 10 ಸಾವಿರ ರೂಪಾಯಿಗಳು ಅದಕ್ಕಿಂತ ಜಾಸ್ತಿ ಅಂದರೆ ಒಂದು ಲಕ್ಷ ರೂಪಾಯಿಗಳು ಬರುತ್ತದೆ. ಒಂದು ಲಕ್ಷ ರೂಪಾಯಿಯಲ್ಲಿ ನಾಲ್ಕು ಬಾವಿಗಳನ್ನು ಕೊರೆಸಲಿಕ್ಕೆ ಆಗುವುದಿಲ್ಲವೆನ್ನುವ ಅರಿವು ಸಹಿತ ನಮಗೆಲ್ಲರಿಗೂ ಗೊತ್ತಿರತಕ್ಕ ವಿಚಾರ. ನಿನ್ನೆ ದಿನ ಮಾನ್ಯ ಕಂದಾಯ ಮಂತ್ರಿಗಳು ಏನು ಹೇಳಿದರು? ಅವರು ಉತ್ತರ ಕೊಡುವಂತಹ ಸಂದರ್ಭದಲ್ಲಿ 200

ಕೋಟಿ ರೂಪಾಯಿಗಳನ್ನು ನಾವು ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿಗಳಿಂದ ಡೈವರ್ಟ್ ಮಾಡಿ ಜೆಆರ್‌ವೈ ಮತ್ತು ಇಎಎಸ್ ಕೆಲಸಗಳನ್ನು ಸೇರಿಸಿದ್ದೇವೆ ಎನ್ನತಕ್ಕ ಮಾತನ್ನು ಹೇಳಿದರು. ಇದು ಜನರನ್ನು ತಪ್ಪುದಾರಿಗೆ ಎಳೆಯತಕ್ಕದ್ದು ಎನ್ನುವುದನ್ನು ನಾನು ಬಹಳ ನೋವಿನಿಂದ ಹೇಳುತ್ತಿದ್ದೇನೆ. ಅದರ ಜೊತೆಗೆ ಹಿಂದೆ ಸಹಕಾರಿ ಸಚಿವರಾಗಿದ್ದಂತಹ ಮಾನ್ಯ ಎಸ್.ಎಸ್.ಪಾಟೀಲರು ಒಂದು ಅಂಶವನ್ನು ಕಂದಾಯ ಮಂತ್ರಿಗಳ ಗಮನಕ್ಕೆ ತಂದರು. ಅದೇನೆಂದರೆ ರೈತರ ಸಾಲದ ಮೇಲಿನ ಬಡ್ಡಿಯನ್ನು ರದ್ದು ಮಾಡತಕ್ಕ ವಿಚಾರದಲ್ಲಿ ಸಹಕಾರ ಮಂತ್ರಿಗಳು ಮತ್ತು ಸಹಕಾರ ಇಲಾಖೆಯವರು ಕೊಟ್ಟಿರತಕ್ಕ ಅಂಕಿಅಂಶಗಳು ಏನಿವೆ ಇವು ಸತ್ಯಕ್ಕೆ ದೂರವಾಗಿರತಕ್ಕ ವಿಚಾರಗಳು. ಎಸ್‌ಎಲ್‌ಡಿ ಮತ್ತು ಪಿಎಲ್‌ಡಿ ಬ್ಯಾಂಕುಗಳಿಂದ ಸಂಪೂರ್ಣವಾಗಿ ಸುಸ್ತಿಬಡ್ಡಿ ಮನ್ನಾ ಆಗತಕ್ಕದ್ದು ಕೇವಲ ನಾಲ್ಕು ಐದು ಕೋಟಿ ರೂಪಾಯಿಗಳು ಅಷ್ಟೇ ಹೊರತು 200 ಕೋಟಿ ರೂಪಾಯಿಗಳಲ್ಲ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಎರಡನೆಯದಾಗಿ ಇದು ಹಕ್ಕುಚ್ಯುತಿಗೂ ಸಹಿತ ಬರುತ್ತದೆ. ಒಂದು ಕಡೆ ನಾವು ಬಡ್ಡಿಯನ್ನು ರದ್ದು ಮಾಡಿದ್ದೇವೆಂದು ಹೇಳತಕ್ಕದ್ದು, ಈಗ ಇಲ್ಲಿ ಬಂದು ನಾವು ಬಡ್ಡಿಯನ್ನು ರದ್ದು ಮಾಡುವುದಕ್ಕಾಗುವುದಿಲ್ಲವೆಂದು ಹೇಳತಕ್ಕದ್ದು ಒಂದು ಭಾಗವಾದರೆ, ಕೇಂದ್ರಸರ್ಕಾರಕ್ಕೆ ಕೊಟ್ಟಿರತಕ್ಕ ಮನವಿ ಪತ್ರ ಏನಿದೆ. ಅದನ್ನು ನಾವು ಕಸದಬುಟ್ಟಿಗೆ ಹಾಕಬೇಕಾಗುತ್ತದೆ. ಈ ಮನವಿಪತ್ರದ ಆಧಾರದ ಮೇಲೆ ಏನಾದರೂ ಕೇಂದ್ರಸರ್ಕಾರದ ಅಧಿಕಾರಿಗಳು ಇಲ್ಲಿಗೆ ನೋಡಲಿಕ್ಕೆ ಬಂದರೆ ಅವರಿಗೆ ಕೊಡಬೇಕೆನ್ನುವ ಮನಸ್ಸು ಇದ್ದರೂ ಒಂದು ರೂಪಾಯಿ ಸಹಿತ ಕೊಡುವುದಿಲ್ಲ. ಸರ್ಕಾರದವರು ಏನು ಮಾಡುತ್ತಿದ್ದರು? ಎಲ್ಲಿ ಮಳೆ ಬಿದ್ದಿದೆ ಅಲ್ಲಿ ಮಳೆ ಬಿದ್ದಿಲ್ಲವೆಂದು ಹೇಳಿದ್ದಾರೆ. ಎಲ್ಲಿ ಮಳೆ ಬೀಳದೆ ಜನ ಗುಳೆ ಹೋಗುತ್ತಿದ್ದಾರೆ ಅದರ ಬಗ್ಗೆ ಒಂದು ಪ್ರಸ್ತಾಪವಿಲ್ಲ. ಕೇಂದ್ರಸರ್ಕಾರದ ತಂಡ ಬರಬೇಕೆನ್ನುವ ಒಂದು ವಾಕ್ಯವನ್ನು ಸೇರಿಸುವುದಕ್ಕೆ ಆಗಿಲ್ಲ ಇವರಿಗೆ. ಈ ಸುಳ್ಳಿನ ವರದಿಯನ್ನು ತೆಗೆದುಕೊಂಡು ಹೋಗಿ ಕೇಂದ್ರಸರ್ಕಾರಕ್ಕೆ ಕೊಟ್ಟು ನೀವು ಪರಿಹಾರ ಕೊಡಿಯೆಂದರೆ ಹೇಗೆ ಕೊಡುತ್ತಾರೆ?

ಶ್ರೀ ಡಿ.ಬಿ.ಚಂದ್ರೇಗೌಡ(ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ. ಸದಸ್ಯರುಗಳನ್ನೆಲ್ಲ ಬಾವಿಗೆ ತಳ್ಳುವುದು ನಾಯಕರುಗಳು ಮಾತನಾಡುವುದು. ಇದು ಒಂದು ತರಹ ಇದೆ.

ಶ್ರೀ ಪಿ.ಜಿ.ಆರ್.ಸಿಂಧ್ಯ: ಇವರು ಮುಖಂಡರಾಗಿದ್ದಾಗ ಏನು ಮಾಡಿದ್ದರು? ಆಗ ನಾನು ಉಪ ನಾಯಕನಾಗಿದ್ದೆ. ಅವರಿಂದ ಕಲಿತಿರುವುದನ್ನು ನಾನು ಇವತ್ತು ಹೇಳುವುದು. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಏನು ಮಾಡಿದರು, ಚಂದ್ರೇಗೌಡರು ಏನು ಮಾಡಿದರು ಡೆವಿಲ್ ಕೋಟಿಂಗ್ ದಿ ಸ್ಕ್ರಿಪ್ಚರ್ಸ್ ಎಂದು ಹೇಳುತ್ತಾರೆ ನೋಡಿ, ದೆವ್ವ ಭಗವದ್ಗೀತೆ ಹೇಳಿದ ಹಾಗೆ ಇವೆಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಚಂದ್ರೇಗೌಡರು ವಿರೋಧಪಕ್ಷದ ನಾಯಕರಾಗಿದ್ದಾಗ ಅವರ ಮುಖಂಡರಾಗಿದ್ದರೇ ಹೊರತಾಗಿ ನಮ್ಮ ಮುಖಂಡರಾಗಿರಲಿಲ್ಲ.

(ನಗು)

ಅಧ್ಯಕ್ಷರು: ನನ್ನ ಪ್ರಾಬ್ಲಮ್ ಏನೆಂದರೆ ಬಾಪಿಯಲ್ಲಿ ಜಾಗ ಕಡಿಮೆಯಿದೆ.

ಶ್ರೀ ಪಿ.ಜಿ.ಆರ್.ಸಿಂಧ್ಯ: ಮಾನ್ಯ ಅಧ್ಯಕ್ಷರೆ, ಈಗ ಪರಿಸ್ಥಿತಿ ಪ್ರತಿದಿನವೂ ಕೂಡ ಗಂಭೀರವಾಗುತ್ತಿದೆ. ಪತ್ರಿಕೆಗಳಲ್ಲಿ ವರದಿಯಾಗುತ್ತಿದೆ. ಪ್ರಜಾವಾಣಿಯಂತಹ ಪ್ರಮುಖವಾದ ಪತ್ರಿಕೆಯಲ್ಲಿ ಸಂಯುಕ್ತ ಕರ್ನಾಟಕ, ಕನ್ನಡಪ್ರಭ ಪ್ರಮುಖವಾದ ಪತ್ರಿಕೆಗಳಲ್ಲಿ ಫೋಟೊ ಸಮೇತ ದನಗಳನ್ನು ಕಸಾಯಿಖಾನೆಗೆ ಕಳುಹಿಸುತ್ತಿರತಕ್ಕದ್ದನ್ನು ಪ್ರಕಟ ಮಾಡುತ್ತಿದ್ದಾರೆ. ದನಕರುಗಳನ್ನು ಕಸಾಯಿಖಾನೆಗೆ ಕಳುಹಿಸುವುದನ್ನು ತಪ್ಪಿಸಲಿಕ್ಕೆ ಸರ್ಕಾರ ಏನು ಕ್ರಮವನ್ನು ತೆಗೆದುಕೊಂಡಿದೆ? ಮುಖ್ಯಮಂತ್ರಿಗಳು ನಿಗೂಢವಾದ ಮೌನವನ್ನು ಸವನದಲ್ಲಿ ತಾಳಿದ್ದಾರೆ. ಯಾವುದೇ ಸಂದರ್ಭದಲ್ಲಿ ಸರ್ಕಾರದ ಕಾರ್ಯಕ್ರಮಗಳನ್ನು ಘೋಷಣೆ ಮಾಡುವಾಗ ಪ್ರಚಾರಕ್ಕೆ ಅವಕಾಶ ಸಿಗಲಿ ಎಂದು ಮಾತನಾಡತಕ್ಕ ಮುಖ್ಯಮಂತ್ರಿಗಳು ವಿರೋಧಪಕ್ಷದ 70 ಜನ ಶಾಸಕರು ಆಡಳಿತ ಪಕ್ಷದ ಹಲವಾರು ಒನ ಇಷ್ಟು ರೋಧನ ಮಾಡಿದರೂ ಸಹಿತ ಅದಕ್ಕೆ ಸ್ಪಂದಿಸತಕ್ಕ ಕೆಲಸವನ್ನು ಮುಖ್ಯಮಂತ್ರಿಗಳು ಮಾಡಲಿಲ್ಲ. ಸರ್ಕಾರ ಬರ ಪರಿಹಾರದ ಕೆಲಸದಲ್ಲಿ ತಯಾರಿ ಮಾತಿಕೊಳ್ಳುವಲ್ಲಿ ವೈಫಲ್ಯವಾಗಿರತಕ್ಕದ್ದು ಒಂದು. ಎರಡನೆಯದಾಗಿ ಅದಕ್ಕೆ ಬೇಕಾಗಿರತಕ್ಕ ತಯಾರಿ ಮಾಡಿಕೊಳ್ಳಬೇಕಾಗುತ್ತದೆ. ಇವರು ಸ್ಪಂದಿಸುತ್ತಿಲ್ಲ ಅದು ನಮ್ಮ ಆಮೂಲಾಗ್ರವಾಗಿರತಕ್ಕ ವಿಚಾರ. ಇವತ್ತು ನಾನು ಹೇಳುತ್ತಿದ್ದೇನೆ, ನಾವು ಇಲ್ಲಿ ಧರಣಿ ಮಾಡಿ ಸದನದ ಕಾರ್ಯಕಲಾಪಗಳನ್ನು ನಿಲ್ಲಿಸಬೇಕೆನ್ನುವ ಉದ್ದೇಶ ನಮಗೆ ಇಲ್ಲ. ಅನೇಕ ಗೌರವಾನ್ವಿತ ಸದಸ್ಯರುಗಳು ತಮ್ಮ ಕ್ಷೇತ್ರದ ಬಗ್ಗೆ ಪ್ರಶ್ನೆಗಳನ್ನು ಕೇಳಿದ್ದಾರೆ. ಇದು ಪ್ರಶ್ನೋತ್ತರ ವೇಳೆ. ನಾವು ಅನಿವಾರ್ಯವಾಗಿ ಈ ಕೆಲಸ ಮಾಡಬೇಕಾಗಿದೆ. ಈ ಸರ್ಕಾರಕ್ಕೆ ಕೊನೆಯ ಪಕ್ಷ ಕೂಲಿ ಮಾಡತಕ್ಕ ಜನ ಆತ್ಮಹತ್ಯೆ ಮಾಡಿಕೊಳ್ಳತಕ್ಕ ಕುಟುಂಬಗಳ ಬಗ್ಗೆ ಅನುಕಂಪ ತೋರಿಸತಕ್ಕ ಧೋರಣೆ ಇಲ್ಲ. ಈಗಾಗಲೇ ನಾವು ನಾಲ್ಕು ವಿಚಾರಗಳನ್ನು ಹೇಳಿದ್ದೇವೆ. ಕೆಪಿಟಿಸಿಎಲ್ ಡಿಸ್‌ಕನೆಕ್ಷನ್‌ಗಳನ್ನು ನಿಲ್ಲಿಸಬೇಕು. ರೈತರ ಸಾಲದ ಮೇಲಿನ ಬಡ್ಡಿಯನ್ನು ಮನ್ನಾ ಮಾಡಬೇಕು. ಅಲ್ಪಾವಧಿ ಸಾಲವನ್ನು ದೀರ್ಘಾವಧಿ ಸಾಲವನ್ನಾಗಿ ಮಾಡಬೇಕು. ಬರಗಾಲದ ಕೆಲಸಗಳು ಪ್ರಾರಂಭವಾಗಬೇಕು. ಕೇಂದ್ರಸರ್ಕಾರಕ್ಕೆ ಇವರು ಕೊಟ್ಟಿರತಕ್ಕ ಅಂಕಿಅಂಶಗಳು ಏನಿವೆ ಅದು ಸರಿಯಲ್ಲ. ಬೇರೆ ಮೆಮೋರಾಂಡಮ್ ಕೊಡಬೇಕಾಗುತ್ತದೆ. ನೀವು ಕೊಟ್ಟಿರುವ ಮೆಮೋರಾಂಡಮ್‌ನಿಂದ ಅನಾಸುತವಾಗುತ್ತದೆ. ಈಗಲಾದರೂ ತಮಗೆ ಹೇಳುತ್ತೇನೆ,

ಅಡಳಿತ ನಡೆಸುತ್ತಿರತಕ್ಕ ಜನಗಳನ್ನು ಕರೆಸಿ, ನಾವು ಬರುತ್ತೇವೆ. ಕುಳಿತುಕೊಂಡು ಚರ್ಚೆ ಮಾಡಿ ಇದಕ್ಕೆ ಏನಾದರೂ ಒಂದು ಪರಿಹಾರವನ್ನು ಕಂಡು ಹಿಡಿಯೋಣ. ಅದನ್ನು ಬಿಟ್ಟು ನಾವು ಹೇಳಿರುವುದೇ ಸರಿ ಎನ್ನುವುದಾದರೆ, ನಾವು ಸಹ ಧರಣಿಯೇ ಸರಿಯೆಂದು ಧರಣಿಯನ್ನು ಮುಂದುವರೆಸುತ್ತೇವೆ.

ಅಧ್ಯಕ್ಷರು: ಮಾನ್ಯ ಚಂದ್ರೇಗೌಡರು ಅವರದು ನಾಲ್ಕು ಡಿಮಾಂಡ್ ಇದೆ ಅದರ ಬಗ್ಗೆ ನೀವು ಏನಾದರೂ ಹೇಳುವುದು ಇದ್ದರೆ ಹೇಳಿ.

+ಶ್ರೀ ಸಿ.ಚೆನ್ನಿಗಪ್ಪ(ಕೊರಟಗೆರೆ): ಮಾನ್ಯ ಅಧ್ಯಕ್ಷರೆ, ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನಾವು ರಾಜ್ಯದ ಜನತೆಯ ಪರವಾಗಿ ನಾಲ್ಕು ದಿವಸಗಳ ಕಾಲ ರೂಲ್ಸ್ 69ರ ಅಡಿಯಲ್ಲಿ ಚರ್ಚೆ ಮಾಡಿದಾಗ ನಾವು ಹೇಳಿದ್ದನ್ನೆಲ್ಲ ಕೇಳಿ ನಾವು ಯಾವುದನ್ನೂ ಮಾಡುವುದಿಲ್ಲವೆನ್ನುವ ಒಂದು ನಿರ್ಧಾರಕ್ಕೆ ಬರಬೇಕಾದರೆ ನಾವೇನು ಮಾಡಬೇಕು? ಇವತ್ತು ರಾಜ್ಯದಲ್ಲಿನ ರೈತರು ಊರುಗಳನ್ನು ಬಿಟ್ಟು ವಲಸೆ ಹೋಗುತ್ತಿದ್ದಾರೆ. ರೈತರ ದನಕರುಗಳು ಇವತ್ತು ಕಸಾಯಿಖಾನೆಗಳಿಗೆ ಹೋಗುತ್ತಿವೆ. ರೈತರ ಸಾಲದ ಮೇಲಿನ ಬಡ್ಡಿಯನ್ನು ಮನ್ನಾ ಮಾಡಿಯೆಂದು ಪರಿಪರಿಯಾಗಿ ಹೇಳಿದರೂ ಕೂಡ ಸರ್ಕಾರ ಕರುಣೆ ತೋರಿಸದೇ ಹೋದರೆ ರೈತರು ಏನಾಗಬೇಕು? ಇವತ್ತು ಇವರು ಏನು ಹೇಳುತ್ತಾರೆಂದರೆ, ಮಾತೆತ್ತಿದರೆ ಬಡವರಿಗೆ ಅನುಕೂಲ ಮಾಡುತ್ತೇವೆ. ರೈತರಿಗೆ ಅನುಕೂಲ ಮಾಡುತ್ತೇವೆಂದು, ಜನರಿಗೆ ಉದ್ಯೋಗ ಕೊಡುತ್ತೇವೆಂದು ಅಧಿಕಾರಕ್ಕೆ ಬಂದು ಯಾವುದನ್ನೂ ಮಾಡುತ್ತಿಲ್ಲ. ಇವತ್ತು ರಾಜ್ಯದ ಜನತೆಗೆ ಕೆಲಸ ಕೊಡುವ ವಿಚಾರ, ಅವರ ಸಾಲದ ಮೇಲಿನ ಬಡ್ಡಿ ಮನ್ನಾ ಮಾಡುವ ವಿಚಾರ, ಕುಡಿಯುವ ನೀರಿನ ವಿಚಾರವಾಗಬಹುದು ಯಾವುದಕ್ಕೂ ಸ್ಪಂದಿಸದೆ ಸರ್ಕಾರ ಮೌನವಾಗಿರುವುದು ಬಹಳ ವಿಷಾದನೀಯವಾದ ವಿಚಾರ. ನಾವು ಧರಣಿ ಮಾಡಬೇಕಾಗಿರಲಿಲ್ಲ. ರಾಜ್ಯದ ಪರಿಸ್ಥಿತಿಯನ್ನು ಅರ್ಥಮಾಡಿಕೊಂಡು ಸರ್ಕಾರ ಕೆಲಸ ಮಾಡಲಿ ಜನರಿಗೆ ಅನುಕೂಲವಾಗಲಿ ಎನ್ನುವ ಉದ್ದೇಶದಿಂದ ನಾವು ಧರಣಿಯನ್ನು ಮಾಡುತ್ತಿದ್ದೇವೆ. ಸರ್ಕಾರ ಏನನ್ನೂ ಮಾಡದಿದ್ದರೆ ಒಂದು ನಿಮಿಷ ಕೂಡ ಅಧಿಕಾರದಲ್ಲಿರಬಾರದೆಂದು ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತೇನೆ.

+ ಶ್ರೀ ಮಲ್ಲಿಕಾರ್ಜುನ ಖರ್ಗೆ(ಗೃಹಮಂತ್ರಿ): ಮಾನ್ಯ ಅಧ್ಯಕ್ಷರೇ,ಈಗಾಗಲೇ ಮಾನ್ಯ ಕಂದಾಯ ಸಚಿವರು ಸವಿಸ್ತಾರವಾದ ಉತ್ತರವನ್ನು ಕೊಟ್ಟಿದ್ದಾರೆ, ಬರಗಾಲ ಪ್ರದೇಶಗಳಲ್ಲಿ ಕುಡಿಯುವ ನೀರಾಗಲೀ, ಜಾನುವಾರುಗಳಿಗೆ ಮೇವಾಗಲೀ, ಕೆಲಸ ಮಾಡತಕ್ಕಂಥ ಕೈಗಳಿಗೆ ಕೆಲಸ ಕೊಡತಕ್ಕಂಥಾದ್ದು ಆಗಲಿ, ಇವುಗಳ ಬಗ್ಗೆ ಸರ್ಕಾರ ಸರ್ವಪ್ರಯತ್ನವನ್ನು ಮಾಡುತ್ತಿದೆ ಮತ್ತು ಅದಕ್ಕೆ ಎಷ್ಟು ಹಣ ಬೇಕೋ ಅಷ್ಟು ಹಣವನ್ನು ಒದಗಿಸತಕ್ಕಂಥ ಸರ್ವ ಸಿದ್ಧತೆಗಳನ್ನು ಮಾಡಿ ಈಗಾಗಲೇ 35 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ. ಮತ್ತೆ ಇನ್ನೂ ಕಡಿಮೆ ಬಿದ್ದರೂ ಕೂಡ

ಪ್ರತಿ ಜಿಲ್ಲೆಗೂ ಕೂಡ ಎಲ್ಲಿ ನೀರಿನ ಅಭಾವ ಇದೆ ಅಥವಾ ಮೇವಿನ ಅಭಾವ ಇದೆ, ಆ ಎಲ್ಲ ಕಡೆಗೂ ಹಣ ಕೊಡುವುದಕ್ಕೆ ಸರ್ಕಾರ ಸಿದ್ಧವಿದೆ. ಅವರು ಹೇಳಿದ್ದಕ್ಕೆಲ್ಲ ಈಗಾಗಲೇ ನಾವು ಸ್ಪಂದಿಸಿದ್ದೇವೆ. ಅವರು ಏನೇನು ಕೇಳಿಕೊಂಡಿದ್ದಾರೆ ಅದಕ್ಕೆಲ್ಲ ಸ್ಪಂದಿಸಿ ಇಂತಹ ಸಂದರ್ಭದಲ್ಲಿ ಯಾವುದೇ ಒಂದು ಸರ್ಕಾರ ಏನು ಪರಿಣಾಮಕಾರಿಯಾಗಿ ಕೆಲಸ ಮಾಡಬೇಕೋ ಅದೇ ರೀತಿಯಲ್ಲಿ ನಾವು ಕೆಲಸ ಮಾಡಿದ್ದೇವೆ. ಅಷ್ಟೇ ಅಲ್ಲ ಅದಕ್ಕಿಂತ ಹೆಚ್ಚಿಗೆ ಆಸಕ್ತಿವಹಿಸಿ ಇವತ್ತು ಈ ಹದಿನೈದು ದಿವಸಗಳಲ್ಲಿ ನಾವು ಕೆಲಸ ಮಾಡುತ್ತಿದ್ದೇವೆ. ಮತ್ತೆ ಮತ್ತೊಂದು ಮಾತು ಕೂಡ ನಾವು ಹೇಳಿದ್ದೇವೆ. ಅವರು ಹೇಳಿದ್ದನ್ನು ನಾವು ಎಂದೂ ಕೂಡ ಅಲ್ಲಗಳೆದಿಲ್ಲ ಅಥವಾ ಅವರು ಬರಗಾಲ ಇದೆಯೆಂದು ಹೇಳಿದರೆ ಅದು ಇಲ್ಲವೆಂದು ನಾವು ಹೇಳಿಲ್ಲ. ಎಲ್ಲ ಮಾಹಿತಿಗಳನ್ನು ಸಂಗ್ರಹಿಸಿಕೊಂಡು ಕೇಂದ್ರಸರ್ಕಾರಕ್ಕೆ ಮೆಮೊರಾಂಡಮ್‌ನ್ನು ಕೊಟ್ಟಿದ್ದೇವೆ. ಮತ್ತು ಈಗಾಗಲೇ ನಮ್ಮ ನಿಸರ್ಗ ಪ್ರಕೋಪ ನಿಧಿಯಿಂದ, ಕೇಂದ್ರಸರ್ಕಾರದಿಂದ ಏನು ಕಂತು ಬರಬೇಕಿತ್ತೋ ಅದರಲ್ಲಿ 29 ಕೋಟಿ ರೂಪಾಯಿಗಳು ಬಂದಿದೆ. ಅದು ಬರುವುದಕ್ಕೆ ಮುಂಚೆ ನಮ್ಮ ವತಿಯಿಂದ ಏನು ಕೊಡಬೇಕಿತ್ತೋ ಎಲ್ಲಾ ಜಿಲ್ಲೆಗಳಿಗೆ ಹಣ ಬಿಡುಗಡೆ ಮಾಡಿದ್ದೇವೆ. ಅಷ್ಟೇ ಅಲ್ಲ ಯಾವ ಕೆಲಸಗಳೇ ಇರಬಹುದು, ಬೋರ್ ವೆಲ್ ಇರಬಹುದು, ಮೈನರ್ ಇರಿಗೇಶನ್‌ಗೆ ಸಂಬಂಧಪಟ್ಟಂತೆ ಇರಬಹುದು ಬೋರ್‌ವೆಲ್‌ಗಳನ್ನು ಹಾಕಬೇಕೆಂದು ಮತ್ತು ಅದನ್ನು ತಕ್ಷಣ ಪ್ರಾರಂಭ ಮಾಡಬೇಕೆಂದು ಆದೇಶವನ್ನು ಕೂಡ ಮಾನ್ಯ ಮುಖ್ಯಮಂತ್ರಿಗಳು ಎಲ್ಲ ಕಡೆ ಕೊಡುತ್ತಿದ್ದಾರೆ. ಹೀಗಾಗಿ ಅವರ ಬೇಡಿಕೆಗಳಿಗೆ ಸ್ಪಂದಿಸತಕ್ಕಂಥ ಕೆಲಸವನ್ನು ನಾವು ಮಾಡುತ್ತಿದ್ದೇವೆ. ಆದರೂ ಕೂಡ ಅವರಿಗೆ ತೃಪ್ತಿ ಇಲ್ಲವೆಂದರೆ ಇದಕ್ಕೆ ಏನು ಹೇಳೋಣ? ಹದಿನೈದು ದಿವಸಗಳಲ್ಲಿ ವರದಿ ತರಿಸಿಕೊಳ್ಳತಕ್ಕಂಥಾದ್ದು ಆಗಲಿ, ಹಣ ಬಿಡುಗಡೆ ಮಾಡುವುದು ಇರಲಿ, ಎಲ್ಲವನ್ನೂ ಕೂಡ ನಾವು ಮಾಡುತ್ತಿದ್ದರೂ ಅವರಿಗೆ ತೃಪ್ತಿ ಇಲ್ಲ. ಆದರೂ ಕೂಡ ಹಠ ಹಿಡಿದು ಧರಣಿ ಮಾಡಬೇಕೆಂದು ಹೊರಟಿದ್ದಾರೆ. ನಾನು ಅವರನ್ನು ಕಳಕಳಿಯಿಂದ ಕೇಳುತ್ತಿದ್ದೇನೆ ಏನೆಂದರೆ ನಾವು ಎಲ್ಲ ಪ್ರಯತ್ನಗಳನ್ನೂ ಮಾಡುತ್ತಿದ್ದೇವೆ ಎಲ್ಲೆಲ್ಲಿ ಏನೇನು ಕೊರತೆ ಇದೆ ಎಂದು ನಮ್ಮಲ್ಲಿರುವ ವರದಿ ಪ್ರಕಾರ ನಾವು ಕೆಲಸ ಮಾಡುತ್ತಿದ್ದೇವೆ. ಜಿಲ್ಲಾಧಿಕಾರಿಗಳಿಂದ ಅಥವಾ ಸಿ.ಇ.ಓ.ಗಳಿಂದ ಬಂದಿರತಕ್ಕಂಥ ಮತ್ತು ಪ್ರತಿನಿಧಿಗಳಿಂದ ಬಂದಿರತಕ್ಕಂಥ ವರದಿಗಳ ಆಧಾರದ ಮೇಲೆ ಏನೇನು ನ್ಯೂನತೆಗಳು ಇವೆ, ಅದನ್ನೆಲ್ಲ ಸರಿಪಡಿಸತಕ್ಕಂಥ ಎಲ್ಲ ಕೆಲಸವನ್ನು ನಾವು ಮಾಡುತ್ತಿದ್ದೇವೆ. ಆದರೂ ನಮ್ಮ ಕಣ್ಣುತಪ್ಪಿ ಎಲ್ಲಿಯಾದರೂ ಇಂತಹ ಕಡೆ ಕುಡಿಯುವ ನೀರಿನ ವ್ಯವಸ್ಥೆಬೇಕು, ಜಾನುವಾರುಗಳಿಗೆ ಮೇವು ಬೇಕು, ಕೂಲಿಗಾರರಿಗೆ ಕೆಲಸ ಬೇಕು ಎಂದು ಹೇಳಿದರೆ ಅದನ್ನು ಕೂಡ ಗಣನೆಗೆ ತೆಗೆದುಕೊಳ್ಳುವುದಕ್ಕೆ ನಾವು ತಯಾರಿದ್ದೇವೆ. ಬಡ್ಡಿ ಮನ್ನಾ ಮಾಡಿಯೆಂದು ಅದನ್ನು ತಕ್ಷಣ ಮಾಡುವುದಕ್ಕೆ ಆಗುತ್ತದೆಯೆ? ಒಂದೇ ದಿವಸಕ್ಕೆ ಅದನ್ನು ಮಾಡುವುದಕ್ಕೆ ಸಾಧ್ಯ ಇದೆಯಾ? ಸುಮ್ಮನೆ

ನಾವು ನೀವು ಒಬ್ಬರಿಗೊಬ್ಬರು ಪ್ರಚಾರ ಮಾಡಿಕೊಳ್ಳುವುದು ಬೇಡ. ಆಗತಕ್ಕಂಥಾದ್ದು ಇದ್ದರೆ ಮುಖ್ಯಮಂತ್ರಿಗಳು ಅನೇಕ ಸಲ ನಿಮ್ಮ ಸಲಹೆಗಳಿಗೆ ಸ್ಪಂಧಿಸಿ ಕೆಲಸ ಮಾಡಿದ್ದಾರೆ. ಅದನ್ನು ಬಿಟ್ಟು ಮಾನ್ಯ ಸಿಂಧ್ಯಾರವರು ಪ್ರತಿಸಲ ಮುಖ್ಯಮಂತ್ರಿಗಳು ಮಾತೇ ಆಡಲಿಲ್ಲ, ಸುಮ್ಮನೆ ಕುಳಿತುಕೊಂಡಿದ್ದಾರೆ ಎಂದರೆ ಇದಕ್ಕೆ ಏನು ಹೇಳಬೇಕು? ಕಂದಾಯ ಮಂತ್ರಿಗಳು ದೀರ್ಘವಾಗಿ ಮೂರುವರೆ ಗಂಟೆಕಾಲ ಭಾಷಣ ಮಾಡಿದ್ದಾರೆ. ಹಣ ಎಷ್ಟೆಷ್ಟು ಬಿಡುಗಡೆ ಮಾಡಿದ್ದೇವೆ, ಏನೇನು ಕೆಲಸಗಳನ್ನು ತೆಗೆದಕೊಂಡಿದ್ದೇವೆ ಎಂಬುದರ ಬಗ್ಗೆ ಸಂಪೂರ್ಣ ಮಾಹಿತಿ ಕೊಟ್ಟು ಮಾತನಾಡಿದ್ದಾರೆ. ಇಷ್ಟೆಲ್ಲ ಹೇಳಿದರೂ ಕೂಡ ನಿಮಗೆ ತೃಪ್ತಿ ಬರುವುದಿಲ್ಲ ಎಂದರೆ ಅದು ನನಗೆ ಅರ್ಥವಾಗುವುದಿಲ್ಲ. ನಾನು ಮಾನ್ಯ ಅಧ್ಯಕ್ಷರ ಮೂಲಕ ವಿರೋಧ ಪಕ್ಷದವರನ್ನು ಕೇಳಿಕೊಳ್ಳುವುದು ಏನೆಂದರೆ ಸಮರೋಪಾದಿಯಲ್ಲಿ ಏನೇನು ಕೆಲಸಗಳನ್ನು ಮಾಡಬೇಕೋ, ಅದು ಪರಿಹಾರ ಕೊಡುವುದಕ್ಕೆ ಇರಬಹುದು, ಕೆಲಸ ಕೊಡುವುದಕ್ಕೆ ಇರಬಹುದು ಎಲ್ಲವನ್ನೂ ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳುತ್ತಾ ಅವರು ತಮ್ಮ ತಮ್ಮ ಸ್ಥಳಗಳಿಗೆ ಮರಳಬೇಕು ಮತ್ತು ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ನಾನು ಹೇಳುತ್ತೇನೆ.

(ಗೊಂದಲ)

ಅಧ್ಯಕ್ಷರು: ದಯವಿಟ್ಟು ಎಲ್ಲರೂ ಸುಮ್ಮನಿರಿ.

ಶ್ರೀ ಜಗದೀಶ್ ಶೆಟ್ಟರ್: ಈಗ ಗೃಹಮಂತ್ರಿಗಳು ಮಾತನಾಡಿದರು ಮತ್ತು ನಮ್ಮನ್ನು ಕೇಳಿಕೊಂಡರು. ನಾವು ರೈತರ ಪರವಾಗಿ ಪ್ರಮುಖವಾಗಿರತಕ್ಕಂಥ ಬೇಡಿಕೆಗಳನ್ನು ಹೇಳಿದ್ದೇವೆ.....

ಅಧ್ಯಕ್ಷರು: ಅದೆಲ್ಲ ಹೇಳಿದ್ದೀರಿ.

ಶ್ರೀ ಜಗದೀಶ ಶೆಟ್ಟರ್: ಆದರೂ ಕೂಡ ಈ ಸರ್ಕಾರ ಮೆಮೊರಾಂಡಮ್ ಕೊಡುವುದರಲ್ಲಿ ವಿಫಲವಾಗಿದೆ, ರೈತರಿಗೆ ಬಡ್ಡಿ ಮನ್ನಾ ಮಾಡುವುದರಲ್ಲಿ ವಿಫಲವಾಗಿದೆ, ಸಾಧ್ಯತೆ ಇದ್ದರೂ ಕೂಡ ಅದನ್ನು ಮಾಡುವುದಕ್ಕೆ ಹೋಗಿಲ್ಲ ಸರ್ಕಾರ ಮನಸ್ಸು ಮಾಡಿದರೆ ಆಗುತ್ತದೆ. ಸಾಲ ವಸೂಲಾತಿಯನ್ನು ತತ್‌ಕ್ಷಣದಿಂದ ನಿಲ್ಲಿಸುವುದಕ್ಕೆ ಇವರು ನಿರ್ದೇಶನ ಕೊಡಬಹುದು. ಎಷ್ಟೋ ಜನ ರೈತರು ಬಂಧನಕ್ಕೆ ಒಳಗಾಗಿದ್ದಾರೆ. ಸಾಲ ಮರುಪಾವತಿ ಮಾಡುವುದಕ್ಕೆ ಅವರ ಕೈಯಿಂದ ಸಾಧ್ಯವಾಗುತ್ತಿಲ್ಲ. ಅಲ್ಪಕಾಲಾವಧಿ ಸಾಲವನ್ನು ದೀರ್ಘಕಾಲಾವಧಿ ಸಾಲವಾಗಿ ಪರಿವರ್ತನೆ ಮಾಡುವುದಕ್ಕೆ ಏನು ತೊಂದರೆ ಇದೆ? ಪಂಪುಸೆಟ್ಟುಗಳಿಗೆ ವಿದ್ಯುತ್ ಡಿಸ್‌ಕನೆಕ್ಟ್ ಮಾಡುತ್ತಿದ್ದಾರೆ. ಈಗ ಬರಗಾಲ ಇದೆ, ಕುಡಿಯುವುದಕ್ಕೆ ನೀರು ಇಲ್ಲ. ಪಂಪುಸೆಟ್ಟುಗಳ ಮೂಲಕ ಹೊಲಕ್ಕೆ ನೀರು ಬಿಡೋಣ ಎಂದರೆ ಅದನ್ನೂ ಡಿಸ್‌ಕನೆಕ್ಟ್

ಮಾಡುವುದಕ್ಕೆ ಹೊರಟಿದ್ದಾರೆ. ಇಂತಹ ಪ್ರಮುಖವಾದ ಬೇಡಿಕೆಗಳನ್ನು ಈಡೇರಿಸುವುದಕ್ಕೆ ಇವರಿಂದ ಸಾಧ್ಯವಾಗುವುದಿಲ್ಲ ಎಂದರೆ ನಾವು ರೈತರ ಪರವಾಗಿದ್ದೇವೆ ಎಂದು ಹೇಳಿಕೊಳ್ಳುವುದರಲ್ಲಿ ಯಾವ ಅರ್ಥವೂ ಇಲ್ಲ. ಇವರಂಥ ನಾಚಿಕೆಗೇಡು ಸರ್ಕಾರ ಬೇರೆ ಯಾವುದೂ ಇಲ್ಲವೆಂದು ಹೇಳಬೇಕಾಗುತ್ತದೆ. ಇವರಂಥ ಭಂಡ ಸರ್ಕಾರ, ನಾಚಿಕೆಗೇಡು ಸರ್ಕಾರ ಬೇರೆ ಯಾವುದೂ ಇಲ್ಲ.

(ಧರಣಿ ಕುಳಿತಿದ್ದ ಸದಸ್ಯರು ರೈತ ವಿರೋಧಿ ಸರ್ಕಾರಕ್ಕೆ ಧಿಕ್ಕಾರ ಎಂದು ಘೋಷಣೆ ಕೂಗಿದರು)

ಅಧ್ಯಕ್ಷರು: ಸ್ವಲ್ಪ ತಡೆಯಿರಿ. ನಿಮ್ಮ ನಾಯಕರು ಮಾತನಾಡುವಾಗ ಅವರೆಲ್ಲರೂ ಸುಮ್ಮನೆ ಇದ್ದಾರೆ. ಅವರು ಮಾತನಾಡುವಾಗ ನೀವು ಗಲಾಟೆ ಮಾಡುವುದು ನ್ಯಾಯವೇನು? ಚಂದ್ರೇಗೌಡರು ಏನೋ ಮಾತನಾಡಬೇಕೆಂದು ಇದ್ದಾರೆ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

(ಧರಣಿ ಕುಳಿತಿದ್ದ ವಿರೋಧಪಕ್ಷದ ಸದಸ್ಯರು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಲೇ ಇದ್ದರು.)

ಶ್ರೀ ಡಿ.ಬಿ.ಚಂದ್ರೇಗೌಡ: ನಾನು ಮಾತನಾಡಬೇಕೆಂದು ಎದ್ದು ನಿಂತಿಲ್ಲ. ಒಂದು ಸಲಹೆ ಕೊಡಬೇಕೆಂದು ಇದ್ದೇನೆ.

(ಧರಣಿ ಕುಳಿತಿದ್ದವರು 'ರೈತ ವಿರೋಧಿ ಸರ್ಕಾರಕ್ಕೆ ಧಿಕ್ಕಾರ, ನೀರು ಕೊಡಲಾರದ ಸರ್ಕಾರಕ್ಕೆ ಧಿಕ್ಕಾರ' ಎಂದು ಕೂಗಿದರು)

ಶ್ರೀ ಸಿ.ಭೈರೇಗೌಡ: ಅಧ್ಯಕ್ಷರೇ.....

(ಗೊಂದಲ)

ಅಧ್ಯಕ್ಷರು: ನಿಮ್ಮ ನಾಯಕರು ಹತ್ತು ನಿಮಿಷ ಮಾತನಾಡಿದ್ದಾರೆ.

ಶ್ರೀ ಸಿ.ಭೈರೇಗೌಡ: ಒಂದೇ ನಿಮಿಷ ಮಾತನಾಡುತ್ತೇನೆ. ಕಳೆದ ಐದು ದಿವಸಗಳಿಂದ ಈ ರಾಜ್ಯದಲ್ಲಿರತಕ್ಕಂಥ ಪರಿಸ್ಥಿತಿಯನ್ನು ಬಹಳ ವಿವರವಾಗಿ ನಾವು ಹೇಳಿದ್ದೇವೆ. ಈ ಕೆಲಸವನ್ನು ನಾವು ಮಾಡುತ್ತಾ ಗುಡ್ಡವನ್ನು ಅಗೆದಿದ್ದೇವೆ. ಆದರೆ ಇದು ಏನು ಆಗಿದೆಯೆಂದರೆ ಕೊನೆಪಕ್ಷ ಇಲಿಯಾದರೂ ಸಿಗಬಹುದು ಎಂದು ನಾವು ಆಸೆಯನ್ನು ಇಟ್ಟುಕೊಂಡು ಗುಡ್ಡವನ್ನು ಅಗೆದಿದ್ದವು. ಆದರೆ ಇಲಿ ಸಿಗುವ ಬದಲಿಗೆ ಇಲಿಯ ಬಾಲ ಕೂಡ ಸಿಕ್ಕಿಲ್ಲ. ಇಲಿಯ ಬಾಲ ಹೋಗಲಿ, ಒಂದು ಇರುವೆ ಕೂಡ ಸಿಗದೇ ಇರತಕ್ಕಂಥ ಪರಿಸ್ಥಿತಿ ಇವತ್ತು ಇದೆ. ಇವತ್ತು ಪತ್ರಿಕೆಗಳಲ್ಲಿ ಬಂದಿರುವ ವರದಿಗಳನ್ನು ನೋಡಿದ್ದೇವೆ, ರಾಜ್ಯದಲ್ಲಿ ಎಂತಹ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು

ನೋಡಿದ್ದೇವೆ, ಜಾನುವಾರುಗಳಿಗೆ ಎಂತಹ ಪರಿಸ್ಥಿತಿಯಾಗಿದೆ ಎಂದು ನೋಡಿದ್ದೇವೆ. ಆದರೆ, ಇಂತಹ ಭಂಡ ಸರ್ಕಾರ ಈ ರಾಜ್ಯದಲ್ಲಿ ಹಿಂದೆ ಯಾವತ್ತೂ ಕೂಡ ಇರಲಿಲ್ಲ. ಈ ರಾಜ್ಯದಲ್ಲಿ ಹಿಂದೆ ಯಾವತ್ತೂ ಕೂಡ ಇಲ್ಲದೇ ಇರತಕ್ಕಂಥ ಪರಿಸ್ಥಿತಿ ನಿರ್ಮಾಣವಾಗುವುದಕ್ಕೆ ಕಾರಣವಾದ,

(ಅತೀವ ಗೊಂದಲ. ಅನೇಕ ಸದಸ್ಯರು ಏಕಕಾಲದಲ್ಲಿ ಮಾತಮಾಡಲು ಪ್ರಾರಂಭಿಸಿದರು. ಅದಕ್ಕೆ ಪ್ರತಿಯಾಗಿ ಧರಣಿ ಕುಳಿತಿದ್ದವರು ಘೋಷಣೆಗಳನ್ನು ಕೂಗಿದರು)

ಅಧ್ಯಕ್ಷರು: ಯಾವುದನ್ನೂ ಬರೆದುಕೊಳ್ಳಬೇಡಿ. ಡೋಂಟ್ ಟೇಕ್‌ಡೌನ್. ಎಲ್ಲರೂ ಒಟ್ಟಿಗೆ ಮಾತನಾಡಿದರೆ ಯಾವುದನ್ನೂ ಬರೆದುಕೊಳ್ಳಬೇಡಿ

10.40 ಎ.ಎಂ

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ: ನೀವು ಬಡ್ಡಿ ವಿಚಾರವೊಂದನ್ನೇ ಹೇಳುತ್ತಾ ಬಂದರೆ ಹೇಗೆ? ಇವತ್ತು ಜನಗಳಿಗೆ ಕೆಲಸ ಕೊಡುವದಕ್ಕೆ ನಾವು ಸಿದ್ಧರಿದ್ದೇವೆ. ಅವರು ಕೇಳುವುದಕ್ಕೆ ಮುಂಚೆಯೇ ನಾವು ಹಣವನ್ನು ಬಿಡುಗಡೆ ಮಾಡಿದ್ದೇವೆ.

(ಗೊಂದಲ)

ಶ್ರೀ ಡಿ.ಬಿ.ಚಂದ್ರೇಗೌಡ: ಕಳೆದ ಮೂರು ದಿವಸಗಳಿಂದ ತುಂಬಾ ಗಂಭೀರವಾಗಿ ಬರಗಾಲದ ವಿಷಯದಲ್ಲಿ ಚರ್ಚೆ ಮಾಡಿದ್ದೇವೆ. ಪ್ರತಿಪಕ್ಷಗಳು ಕೊಟ್ಟಂಥ ಸಲಹೆ ಸೂಚನೆಗಳನ್ನು ಸರ್ಕಾರ ಗಮನಿಸಿದೆ. ತಾವು ಅಲ್ಲಿಂದ ನಿನ್ನೆ ಒಂದು ಆದೇಶವನ್ನು ಕೊಟ್ಟಿದ್ದೀರಿ. ಇವತ್ತು ಸಾಯಂಕಾಲ ಮಂತ್ರಿಮಂಡಲದ ಸಭೆ ಸೇರುತ್ತಿದ್ದಾರೆ, ನೋಡೋಣ ಏನಾದರೂ ಆಗಬಹುದು ಎಂಬ ಅಭಿಪ್ರಾಯವನ್ನು ವ್ಯಕ್ತ ಮಾಡಿದಿರಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಇಂಥಿಂಥ ಕ್ರಮಗಳನ್ನು ಕೈಗೊಂಡಿದ್ದೇವೆಂಬುದನ್ನು ಹೇಳಲಿ.

(ಗೊಂದಲ)

ಶ್ರೀ ಡಿ.ಬಿ.ಚಂದ್ರೇಗೌಡ: ಮಾನ್ಯ ಅಧ್ಯಕ್ಷರೇ, ನಾನು ಕೆಲವು ಶಬ್ದಗಳನ್ನು ನನ್ನ ಬಾಯಿಂದ ಹೇಳುವುದು ಬೇಡವೆಂದು ಅಂದುಕೊಂಡಿದ್ದೇನೆ. ಆದರೆ, ತಾವು ಎಷ್ಟು

ಗಂಭೀರವಾಗಿ ಆ ಜಾಗದಿಂದ ಆದೇಶವನ್ನು ಕೊಟ್ಟಿರೋ ಅಷ್ಟೇ ಗಂಭೀರವಾಗಿ ಸುಮಾರು ಎರಡು ಎರಡೂವರೆ ಗಂಟೆಗಳ ಕಾಲ ಸುದೀರ್ಘವಾಗಿ ಸಚಿವ ಸಂಪುಟದಲ್ಲಿ ಚರ್ಚೆ ಮಾಡಿದ್ದೇವೆ. ಪ್ರತಿಯೊಬ್ಬ ಸದಸ್ಯರು ಕೊಟ್ಟಂಥ ಸಲಹೆಯನ್ನೂ ಚರ್ಚೆ ಮಾಡಿದ್ದೇವೆ. ಪರಿಹಾರಗಳನ್ನು ಏನು ಕೊಡಬಹುದು ಎಂಬ ಕೆಲವು ನಿರ್ಣಯಗಳನ್ನು ಈಗಾಗಲೇ ಮಾನ್ಯ ಹಿರಿಯ ಸಚಿವರು ಹೇಳಿದ್ದಾರೆ. ನಾನು ಪುನಃ ಅದನ್ನು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ, ಈಗಲೂ ನಾನು ಅವರಿಂದ ಏನನ್ನು ಅಪೇಕ್ಷೆ ಮಾಡುತ್ತೇನೆಂದರೆ, ಎಲ್ಲಾ ಹಿರಿಯರು, ಅನುಭವಿಗಳೂ, ನುರಿತ ಮತ್ತು ಸಾಕಷ್ಟು ಈ ವಿಧಾನ ಸಭೆಯ ಕಲಾಪಗಳಿಗೆ ತಮ್ಮದೇ ಆದ ರೀತಿಯಲ್ಲಿ ಈ ಸಭೆಯ ಮೂಲಕ ರಾಜ್ಯಕ್ಕೆ ಸಲಹೆಗಳನ್ನು ಕೊಟ್ಟಿದ್ದಾರೆ. ಈಗಲೂ ಕಾಲ ಏನೂ ಬಹಳ ಮಿಂಚಿ ಹೋಗಿಲ್ಲ. ಇದು ನಾವೆಲ್ಲರೂ ಸೇರಿ ತೀರ್ಮಾನ ಮಾಡಬೇಕಾದಂಥ ವಿಚಾರ. ಸರ್ಕಾರವೊಂದೇ ಜವಾಬ್ದಾರಿಯನ್ನು ವಹಿಸಿಕೊಂಡು ಇವತ್ತಿನ ಪರಿಸ್ಥಿತಿಯನ್ನು ನಿಭಾಯಿಸುವುದು ಕಷ್ಟ. ಎಲ್ಲರೂ ಕುಳಿತು, ಚರ್ಚೆ ಮಾಡಿ ಅರ್ಥ ಮಾಡಿಕೊಂಡರೆ ಇದು ಸಾಧ್ಯ. ಅದಕ್ಕಾಗಿ ನನ್ನದೊಂದು ಸಲಹೆ. ತಾವು ಅಧ್ಯಕ್ಷರಾಗಿ ಮುಖಂಡರುಗಳನ್ನು ಕರೆಯಿರಿ. ಎಲ್ಲರೂ ಕುಳಿತು, ಕೆಲವು ವಿಚಾರಗಳನ್ನು, ವಿದ್ಯಮಾನಗಳನ್ನು ಚರ್ಚೆ ಮಾಡೋಣ. ಇದನ್ನು ಮುಗಿಸುವುದಕ್ಕೆ ಪ್ರಯತ್ನ ಮಾಡೋಣ. ಇದಕ್ಕಿಂತ ಹೆಚ್ಚು ಸಲಹೆಯನ್ನೇನೂ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ.

ಅಧ್ಯಕ್ಷರು: ಈಗ ಮಾನ್ಯ ಚಂದ್ರೇಗೌಡರು, ಶ್ರೀಕಂಠಯ್ಯನವರು, ಸಹಕಾರಿ ಸಚಿವರು, ಜಯಚಂದ್ರರವರು ಮತ್ತು ಖರ್ಗೆಯವರು ಅನಂತರ ನಮ್ಮ ವಿರೋಧಪಕ್ಷಗಳ ನಾಯಕರುಗಳು ನಮ್ಮ ಚೇಂಬರಿಗೆ ಬರಲಿ. ಈಗ ಸಭೆಯನ್ನು ಅರ್ಧ ಗಂಟೆಗಳ ಕಾಲ ಮುಂದೂಡುತ್ತೇನೆ. ಏಕೆಂದರೆ, 400-500 ಕೋಟಿ ರೂಪಾಯಿಯನ್ನು ಅವರು ಎಲ್ಲಿ ತರುವುದಕ್ಕಾಗುತ್ತದೆ? ಅವರ ಕಷ್ಟ ಏನಿದೆ ಎಂಬುದನ್ನೂ ಕೇಳೋಣ, ಮಾನ್ಯ ಚಂದ್ರೇಗೌಡರು ಹೇಳಿದ ಸಲಹೆ ಸರಿಯಾಗಿದೆ. ಅವರು ಏನು ಸಲಹೆಗಳನ್ನು ಹೇಳುತ್ತಾರೆ, ಅವರ ಕಷ್ಟ ಏನಿದೆ ಅದನ್ನೂ ಕೇಳೋಣ. ಮಾನ್ಯ ಸಿದ್ಧಾರವರೇ, ನಿಮ್ಮ ಸರ್ಕಾರ ಇದ್ದಾಗ ಎಷ್ಟು ಕೋಟಿ ರೂಪಾಯಿಗಳನ್ನು ಮನ್ನಾ ಮಾಡಿದ್ದಿರಿ. ಈಗ ಅರ್ಧ ಗಂಟೆ ಸದನವನ್ನು ಮುಂದೂಡುತ್ತೇನೆ. ಈಗಾಗಲೇ ನಾನು ಹೇಳಿದ ನಾಯಕರು ಬರಲಿ. ನೋಡೋಣ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಅವರು ಇದ್ದಾಗ ಮುಂದೆ ಬಡ್ಡಿ ಮನ್ನಾ ಮಾಡುವುದಿಲ್ಲವೆಂದೂ ಬರೆದು ಕೊಟ್ಟರು.

ಅಧ್ಯಕ್ಷರು: ನೋಡೋಣ, ಮಾತುಕತೆಯಲ್ಲಿ ಯಾವ ಯಾವ ಅಂಶಗಳು ಹೊರಬರುತ್ತವೆ, ಅವರು ಬರಲಿ ಮಾತನಾಡೋಣ. ದಯವಿಟ್ಟು ನಾಯಕರುಗಳು ಬರಬೇಕು. ಈಗ ಸಭೆಯನ್ನು ಅರ್ಧ ಗಂಟೆ ಮುಂದೂಡಿರುತ್ತೇನೆ.